









**ಪತ್ರಕರ್ತ:** ಮೇಡಂ, ಮಹಿಳಾ ದಿನಾಚರಣೆಯ ಶುಭಾಶಯಗಳು. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರಕ್ಕೆ ಏನು ಒತ್ತಾಯ ಮಾಡ್ತೀರಿ?
**ಮಹಿಳೆ:** ಒಂದೇ ಒಂದು ಜಾಹೀರಾತು ಇಲ್ಲದೆ ಧಾರಾವಾಹಿಗಳನ್ನು ಪ್ರಸಾರ ಮಾಡುವ ಕಾನೂನು ತರಬೇಕು. ಅದೇ ನನ್ನ ಒತ್ತಾಯ.

**ಶಿಕ್ಷಕ:** ಭಾಷೆ ಅರ್ಥ ಆಗುತ್ತೋ ಇಲ್ವೋ ಅದೇ ಡೌಟ್ ನನಗೆ. ಒಂದಲ್ಲ ಎರಡು ಬಾರಿ ಬಿ ಸೈಲೆಂಟ್, ಬಿ ಸೈಲೆಂಟ್ ಅಂತ ಹೇಳಿದ್ರು ಗುಸು ಗುಸು ಅಂತ ಸೌಂಡ್ ಮಾಡ್ತಿದ್ದೀರಿ.
**ವಿದ್ಯಾರ್ಥಿ:** ನಿಜ ಸಾರ್ ಡೌಟಲ್ಲಿ ಬಿ ಸೈಲೆಂಟ್!

**ವೆಂಕಟ:** ಅಯ್ಯಾ ಬಾಲಾಜಿ, ಮನೇಲಿ ಸೋಫಾ ಇದ್ದರೂ ಬೀದಿಯ ಜಗಲಿಕಟ್ಟೆ ಮೇಲೆ ಯಾಕೆ ಕೂತಿರ್ತೀಯಾ?
**ಬಾಲಾಜಿ:** ನಾನಿನ್ನೂ ಗಟ್ಟಿಮುಟ್ಟಾಗಿ ಇದ್ದೇನೆಂದು ಜನಕ್ಕೆ ಗೊತ್ತಾಗಲಿ ಅಂತ.

**ವೆಂಕಟ:** ಅಯ್ಯಾ ಬಾಲಾಜಿ ನಿನ್ ಮಗ ಹೇಗೆ ಓದುತ್ತಿದ್ದಾನೆ?
**ಬಾಲಾಜಿ:** ಕಾಮ, ಫುಲ್ ಸ್ಟಾಫ್ ನೋಡ್ಕೊಂಡು ಓದ್ತಾ ಇದ್ದಾನೆ.

**ಪತ್ರಕರ್ತ:** ಕನ್ನಡ ಕನ್ನಡ ಅಂತ ಮಾತು ಮಾತಿಗೆ ಅಭಿಮಾನ ತೋರುತ್ತಿರುವ ನೀವು ಕನ್ನಡಕ್ಕಾಗಿ ಏನೇನು ಮಾಡ್ತಾ ಇದ್ದೀರಿ?
**ಅಭಿಮಾನಿ:** ವಾರಕ್ಕೊಂದು ಕನ್ನಡ ಸಿನಿಮಾ ನೋಡ್ತಿನಿ.
**ಪತ್ರಕರ್ತ:** ಕನ್ನಡ ಸಿನಿಮಾಗಳು ಥಿಯೇಟರ್‌ನಲ್ಲಿ ಓಡ್ತಾ ಇಲ್ವೆ.
**ಅಭಿಮಾನಿ:** ನಾನು ಕನ್ನಡ ಸಿನಿಮಾ ನೋಡೋದು ಟೀವಿನಲ್ಲಿ.

**ಅಜ್ಜಿ:** ಯಾಕಮ್ಮಾ ಇಂಚರ, ನಿಂತ್ಕೊಂಡು ಊಟ ಮಾಡ್ತಾ ಇದ್ದೀಯಾ? ಕೂತ್ಕೊಂಡು ಆರಾಮಾಗಿ ಊಟ ಮಾಡಬಾರದೆ?
**ಇಂಚರ:** ನಿನ್ನೆ ತಾನೆ ಹೇಳಿದೆ, ಕೂತು ಉಣ್ಣೋರಿಗೆ ಕುಡಿಕೆ ಹೊನ್ನು ಸಾಲದು ಅಂತ.

ಸಂಗ್ರಹ: ಮಲ್ಲಿಕಾರ್ಜುನ ಸುರಧೇನುಪುರ

